

ಡಾ.ವಿನೋದ ಛೆಬ್ಬಿ

ಸಾಯುವವರು ಏನು ಬಯಸುತ್ತಾರೋ ಅದನ್ನೆಲ್ಲ ಕೊಡಿ; ನಿಮಗೆ ಬೇಕಾದುದನ್ನಲ್ಲ!

# 323: ಹೊಸ ದಾರಿ - 63

ಸಾವಿನ ಬಗೆಗೆ, ಆನಂತರದ ಬದುಕಿನ ಬಗೆಗೆ, ಬಹುಬದುಕುಗಳನ್ನು ಬದುಕುವುದರ ಬಗೆಗೆ, ಹಾಗೂ ಕಾಲಾತೀತ ಆಗುವುದರ ಬಗೆಗೆ ಮಾತಾಡುತ್ತಿದ್ದೇವೆ. ಇಷ್ಟರಲ್ಲೇ ಓದುಗರೊಬ್ಬರು ಸ್ಪಂದಿಸಿದ್ದಾರೆ: 'ಸಾವೆಂದರೆ ಭಯ ಎನ್ನುವುದು ಸುಮಾರು ಎಲ್ಲರಲ್ಲೂ ಇದೆ. ಹತ್ತಿರದವರು ಯಾರಾದರೂ ಸತ್ತರೆ ನೋಡವುದಿರಲಿ, ಭಯಪಟ್ಟು ಮನೆಯಿಂದ ಹೊರಗೇ ಹೋಗುವುದಿಲ್ಲ. ಸ್ವತಃ ತಾಯಿ ಸಾಯುವಾಗ ಕೋಣೆಯೊಳಗೆ ಹೋಗದ ಮಗನನ್ನು ನೋಡಿದ್ದೇನೆ. ಮನುಷ್ಯ ಸತ್ತಮೇಲೆ ಅಲ್ಲಿಯ ತನಕ ಇರುವ ಬಾಂಧವ್ಯ ಎಲ್ಲಿ ಹೋಗುತ್ತದೆ? ಸಾವಿನ ಹೊರತಾದ ಜೀವಂತಿಕೆ (ಅಂದರೆ ಇತರರ ಮನದಲ್ಲಿ ಬದುಕಿರುವುದು) ಎಂದು ನೀವು ಹೇಳಿರುವುದು ಇಲ್ಲಿ ಮುಖ್ಯವಾಗುತ್ತದೆ.' ಎಂದಿದ್ದಾರೆ.

ನಿಜ, ನೀವು ತಿಳಿಸಿದ ದೃಷ್ಟಾಂತವನ್ನು ಹಲವು ರೀತಿಗಳಲ್ಲಿ ಅರ್ಥೈಸಬಹುದು. ಮಗನಿಗೆ ತಾಯಿಯನ್ನು ಕಳೆದುಕೊಂಡು ಅನಾಥವಾಗುವ ಭಯಕ್ಕಿಂತ ತಾಯಿ ಸಾವನ್ನು ಎದುರಿಸುವ ಪ್ರಸಂಗವೇ ಭಯ ತರುತ್ತಿರಬಹುದು. ಉದಾಹರಣೆಗೆ, ತನ್ನನ್ನು ಕಾಪಾಡಿದ ತಾಯಿಯನ್ನು ತಾನು ಕಾಪಾಡಲು ಆಗುತ್ತಿಲ್ಲ ಎನ್ನುವ ಅಸಹಾಯಕತೆ; ಸರ್ವಸಮರ್ಥಳೆಂದು ತಾನೆಂದುಕೊಂಡ ತಾಯಿಯು ವಿಧಿಯೆದುರು ದುರ್ಬಲಳಾಗುವುದನ್ನು ಒಪ್ಪಿಕೊಳ್ಳದಿರುವಿಕೆ; ಅಥವಾ, ತಾಯಿಯು ಅನುಭವಿಸುತ್ತಿದ್ದುದನ್ನು ನರಳಿಕೆಯೆಂದು ಗ್ರಹಿಸಿ, ಸಹಿಸಲು ಆಗದಿರುವಿಕೆ. ಇದರಲ್ಲಿ ಕೊನೆಯ ಸಾಧ್ಯತೆಯು ಇನ್ನೊಂದು ಯಥಾರ್ಥತೆಯನ್ನು ಬೆಳಕಿಗೆ ತರುತ್ತದೆ: ಸಾಯುವ ಭಯಕ್ಕಿಂತ ಸಾವು ಹೇಗೆ ಬರುತ್ತದೆ — ಅಂದರೆ, ಸಾವು ಬರುವ ರೀತಿಯೇ ಧೃತಿಗೆಡಿಸುತ್ತದೆ! (ಇದರ ನಿರ್ವಹಣೆ ಹೇಗೆಂದು ಆಮೇಲೆ ವಿವರಿಸುತ್ತೇನೆ.) ಇದು ಎರಡು ಪ್ರಶ್ನೆಗಳಿಗೆ ಹಾದಿಮಾಡಿಕೊಡುತ್ತದೆ: ಒಂದು: ಒಬ್ಬರು ಸಾಯುವುದನ್ನು ಬದುಕಿರುವ ನಾವು ಹೇಗೆ ಗಣಿಸುತ್ತೇವೆ? ಎರಡು: ಆತ್ಮೀಯರು ಸಾಯುವುದು ಅನಿವಾರ್ಯವಾಗಿ, ಏನೂ ಮಾಡುವುದು ಬಾಕಿ ಇಲ್ಲದಿರುವಾಗ ಇನ್ನೇನು ಮಾಡಬಹುದು?

ಇನ್ನೊಬ್ಬರ ಸಾವನ್ನು ಹೇಗೆ ಪರಿಗಣಿಸುತ್ತೇವೆ? ಸತ್ತವರು ಎಂಥ ವ್ಯಕ್ತಿಯಾಗಿದ್ದರು ಎನ್ನುವ ವಸ್ತುತಃ ಅರಿವಿಗಿಂತಲೂ ಅವರು ನಿಮ್ಮೊಡನೆ ಇಟ್ಟುಕೊಂಡ ಸಂಬಂಧವು ಹೇಗಿತ್ತು ಎನ್ನುವ ವೈಯಕ್ತಿಕ ಗ್ರಹಿಕೆಯೇ ನಿಮ್ಮ ಸ್ಪಂದನೆಯನ್ನು ನಿರ್ಧರಿಸುತ್ತದೆ. ನಾನು ಕಂಡ ಒಬ್ಬರು ಸತ್ತಾಗ ಮೊಹಲ್ಲಾದ ಜನರೆಲ್ಲ ಎಂಥಾ ಪರೋಪಕಾರಿ ಎಂದು ಕಣ್ಣೀರಿಡುತ್ತಿದ್ದರೆ ಅವರ ಬಾಳಸಂಗಾತಿಯು 'ಈ ಮನುಷ್ಯ ನನಗೇನೂ ಮಾಡಲೇ ಇಲ್ಲ!' ಎಂದು ಹೆಣವನ್ನು ಬಡಿದೂ ಬಡಿದೂ ಆಕ್ರೋಶಿಸುತ್ತಿದ್ದುದು, ಅವರ ಇಬ್ಬರು ಮಕ್ಕಳು ದೂರದಲ್ಲಿ ಕಲ್ಲಾಗಿ ಕುಳಿತಿದ್ದುದು ನೆನಪಿದೆ. ಸತ್ತವರೊಡನೆಯ ಸಂಬಂಧವು ಶುದ್ಧ ಆತ್ಮೀಯತೆಯದ್ದೋ (ಉದಾ. ಸ್ನೇಹಿತರು, ಚಿಕ್ಕಮಕ್ಕಳು), ದ್ವೇಷ, ಅಸಹನೆಯದ್ದೋ (ಉದಾ. ಹಿತಶತ್ರುಗಳು), ಅಥವಾ ತೀರಾ ವ್ಯವಹಾರದ್ದೋ (ಉದಾ. ಹೆಸರು ಗೊತ್ತಿಲ್ಲದ ಸಹೋದ್ಯೋಗಿ) ಆಗಿರಬಹುದು. ಸಂಬಂಧದ ಮೇಲಿಂದ ಸಂತಾಪವನ್ನೋ ನಿಟ್ಟುಸಿರನ್ನೋ ಹೊರಹಾಕುತ್ತೀರಿ. (ಗೋಮುಖವ್ಯಾಘ್ರ ವ್ಯಕ್ತಿಯೊಬ್ಬರು ಸತ್ತಾಗ ಅವನಿಂದ ನೊಂದ ಒಬ್ಬರು ಏನು ಹೇಳಿದರು? 'ಅವನು ಸತ್ತ ಅಂತ ಬದುಕಿದ. ಇಲ್ಲದಿದ್ದರೆ ನಾನೇ ಗುಂಡಿಕ್ಕಿ ಸಾಯಿಸಿಬಿಡುತ್ತಿದ್ದೆ!') ಕೆಲವೊಂದು ಸಂದರ್ಭದಲ್ಲಿ ನಿಮ್ಮ ಪ್ರೀತಿಪಾತ್ರರೇ ದೀರ್ಘ ನರಳಿಕೆಯ ನಂತರ ಸತ್ತರೆ ಸಂತಾಪದಲ್ಲೂ ನಿಟ್ಟುಸಿರು ಬಿಡುತ್ತೀರಿ. ಯಾಕೆ? ವರ್ಷಗಟ್ಟಲೆ ಆಸ್ಪತ್ರೆಗೆ ಯಾತ್ರೆ, ಒಂದೊಂದೇ ಅಂಗ ವಿಫಲವಾಗುವಾಗ ಹೆಚ್ಚುವ ನೋವು–ನರಳಿಕೆ, ಅಸಹಾಯಕತೆ ಕೊನೆಗೂ ಮುಕ್ತಿ ಸಿಕ್ಕಿತಲ್ಲ! ನಮ್ಮ ಹಿರಿಯ ವೈದ್ಯ ಸ್ನೇಹಿತರೊಬ್ಬರು (ಅವರು ಬುದ್ಧಿವಂತರಾಗಿದ್ದರೂ ಶೀಘ್ರಕೋಪಿಯಾಗಿದ್ದು ಯಾವುದೇ ಸಂಬಂಧವನ್ನೂ ಸರಿಯಾಗಿ ನಿಭಾಯಿಸುತ್ತಿರಲಿಲ್ಲ.) ತೀರಿಕೊಂಡಾಗ ಇನ್ನೊಬ್ಬ ವೈದ್ಯಸ್ನೇಹಿತ ಎಲ್ಲರೆದುರೂ ಉದ್ಗರಿಸಿದ: 'ಇವರು ಸತ್ತು ಕಿರಿಕಿರಿ ನಿಲ್ಲಿಸಿ, ಈಗಲಾದರೂ ತನ್ನ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಲು ಅವಕಾಶ ಕೊಟ್ಟರು!' ಇದಕ್ಕೆ ಅವರ ದುಃಖಿತಪ್ತ ಹೆಂಡತಿಯ ಮುಖದಲ್ಲೂ ಹಾಸ್ಯ ಲಾಸ್ಯವಾಡಿತು. ಆಶ್ಚರ್ಯವಲ್ಲದ ಮಾತೆಂದರೆ, ಹೆಚ್ಚಿನ ಸಾಂಪ್ರದಾಯಿಕ ದಾಂಪತ್ಯಗಳು ಪ್ರೇಮ, ದ್ವೇಷ ಎರಡರಿಂದಲೂ ಕೂಡಿರುತ್ತವೆ, ಹಾಗಾಗಿ ಒಂದುವೇಳೆ ಸತ್ತ ಸಂಗಾತಿಯ ಬಗೆಗೆ ದುಃಖದೊಡನೆ ಕಹಿಭಾವವಿದ್ದರೆ ತಪ್ಪೇನಿಲ್ಲ.

ಸಾವನ್ನು ಪರಿಗಣಿಸುವಾಗ ಸಾವಿನ ದಾರುಣತೆಯೂ ಮನಸ್ಸನ್ನು ತಟ್ಟುತ್ತದೆ. ಉದಾಹರಣೆಗೆ, ರಸ್ತೆ ಅಪಘಾತದಲ್ಲಿ ಗೊತ್ತಿಲ್ಲದವರು ಸತ್ತರೆ ಅವರ ಬಗೆಗೆ ಏನೂ ಅನ್ನಿಸಲಿಕ್ಕಿಲ್ಲ, ಆದರೆ ಸತ್ತ ರೀತಿಯೇ ಮನವನ್ನು ಕಲಕುತ್ತದೆ. ನಾನು ಹದಿನಾರರಲ್ಲಿ ಸೇತುವೆಯ ಮೇಲೆ ಸಾಗುತ್ತಿದ್ದಾಗ ಜನ ಗುಂಪಾಗಿ ಕೆಳಗೆ ಇಣುಕುತ್ತಿದ್ದುದು ಕಂಡಿತು. ನಾನೂ ಕುತೂಹಲದಿಂದ ಇಣುಕಿದೆ. ಇಪ್ಪತ್ತು ಅಡಿ ಕೆಳಗೆ ರೈಲುಹಳಿಯ ಮೇಲೆ ಒಬ್ಬನ ರುಂಡ ಮುಂಡ ಮಾತ್ರ ಇದ್ದವು. ಕುತ್ತಿಗೆ ಇರಲಿಲ್ಲ. ರಕ್ತವೇನೂ ಕಾಣಲಿಲ್ಲ. ಮೊದಲು ಏನೂ ಅರ್ಥವಾಗಲಿಲ್ಲ. ಅರ್ಥವಾದ ನಂತರ ಮೂರು ದಿನ–ರಾತ್ರಿ ದೃಶ್ಯವು ಕಣ್ಣಿಗೆ ಕಟ್ಟಿದಂತಿತ್ತು. ಗಂಡಾದ ತಪ್ಪಿಗೆ ತಾಯಿಯೊಡನೆ ಹಂಚಿಕೊಳ್ಳದೆ ಒಬ್ಬನೇ ಅನುಭವಿಸಿದೆ.

ಆತ್ಮೀಯರ ಸಾವು ಅನಿವಾರ್ಯವಾಗಿ, ಮಾಡುವುದೇನೂ ಇಲ್ಲದಿರುವಾಗ ಇನ್ನೇನು ಮಾಡಬಹುದು? ಸಾಯುವವರಿಗೆ ಸಾಯಲು ಅನುಕೂಲ ಮಾಡಿಕೊಡುವುದೇ ಮೊದಲ ಆದ್ಯತೆ. ಮೂವತ್ತು ವರ್ಷಗಳಿಗಿಂತಲೂ ಹಿಂದಿನ ಮಾತು. ಒಬ್ಬ ಪತ್ರಕರ್ತರ ಕುಟುಂಬ ವೈದ್ಯನಾಗಿದ್ದೆ. ಅವರ ವೃದ್ಧತಂದೆ ದೀರ್ಘಕಾಲದಿಂದ ಹಾಸಿಗೆ ಹಿಡಿದಿದ್ದರು. ಒಂದು ಘಟ್ಟದಲ್ಲಿ ಯಾವುದೇ ಚಿಕಿತ್ಸೆ ಪ್ರಯೋಜನವಿಲ್ಲದಾಗಿ, ನನ್ನ ವೈದ್ಯಸಾಕ್ಷಿ ಮನಸ್ಸು ಚುಚ್ಚಿತು. ಹಾಗಾಗಿ ವೈದ್ಯಬುದ್ಧಿ ಬಿಟ್ಟುಕೊಟ್ಟೆ. ಅವರ ಮರಣವನ್ನು ಸುಲಲಿತ ಮಾಡುವುದು ಉದ್ದೇಶವಾಯಿತು. ಆದರೆ ಸಾಯುತ್ತಿರುವವರನ್ನು ಸಂಪರ್ಕಿಸುವ ಬಗೆಗೆ ವೈದ್ಯಶಿಕ್ಷಣದಲ್ಲಿ ಒಂದೂ ಮಾತಿಲ್ಲ. ಹಾಗಾಗಿ ನಾನೆಂದುಕೊಂಡ ಮಾನವತೆಯನ್ನೇ ಮುಂದಿಟ್ಟುಕೊಂಡು ನನ್ನದೇ ಪ್ರಶ್ನೆಗಳನ್ನು ಕೇಳಲು ಸಾಹಸಪಟ್ಟೆ. ಹೊಡೆದುಕೊಳ್ಳುವ ಹೃದಯದ ಬಡಿತವನ್ನು ಹತ್ತಿಕ್ಕುತ್ತ, 'ಯಾವ ಔಷಧಿಯೂ ನಿಮಗೆ ನಾಟುತ್ತಿಲ್ಲ. ಏನು ಮಾಡುವುದು?' ಎಂದು ಬಾಯಿತೆರೆದು, 'ನಿಮಗೆ ಹೇಗೆ ಅನ್ನಿಸುತ್ತಿದೆ?' ಎಂದು ಕೇಳಿದೆ. ಅವರು, ಇನ್ನೇನು ಮಾಡುವುದು ವಯಸ್ಸಾಯಿತಲ್ಲ ಎಂದು ಉತ್ತರಿಸಿ ಸುಮ್ಮನಾದರು. ಅವರ ಮನದಲ್ಲಿ ಇರುವುದನ್ನು ತಿಳಿದುಕೊಳ್ಳುವುದು ಹೇಗೆಂದು ತಿಳಿಯಲಿಲ್ಲ. ಹಿರಿಯರು ಗತಕಾಲದ ಬಗೆಗೆ ನಿರರ್ಗಳವಾಗಿ ಆಡುವುದು ಗೊತ್ತಿತ್ತು. ಹಾಗಾಗಿ, 'ನಿಮ್ಮಕಾಲದಲ್ಲಿ ಹೇಗಿತ್ತು?' ಎಂದು ಶುರುಮಾಡಿದ್ದೇ ತಡ, ನಿಧಾನವಾಗಿ ಮಾತಾಡಲು ಶುರುಮಾಡಿದರು. ಕೆದಕಿ ಕೆದಕಿ ಅವರ ಬಾಲ್ಯದ ಅನುಭವಗಳನ್ನು ಕೇಳುತ್ತ, ಅಲ್ಲಲ್ಲಿ ಉದ್ಗಾರ ಎತ್ತುತ್ತಿದ್ದೆ. ಹಾಗೆಯೇ ಅವರಿಗೇನಾದರೂ ತಪ್ಪಿತಸ್ಥ ಭಾವವಿದೆಯೇ ಎಂದು ವಿಚಾರಿಸಿದೆ. ಬರಬರುತ್ತ ಮಾತುಗಳು ಮುಗಿದವು. ಮೌನವಾಗಿ ಅವರ ಕೈಹಿಡಿದುಕೊಂಡು ಸವರುತ್ತ ಗಂಟೆಗಟ್ಟಲೆ ಕೂರುತ್ತಿದ್ದೆ. ಅವರು ನೋಡುವ ಶೂನ್ಯವನ್ನು ನಾನೂ ನೋಡಲು ಪ್ರಯತ್ನಪಟ್ಟೆ. ಕ್ರಮೇಣ ಅವರಿಲ್ಲವಾದರು. ಶ್ರಾದ್ಧದ ಊಟಕ್ಕೆ ಕರೆಬಂದಾಗ ಯಾವೊತ್ತೂ ಹೋಗದಿರುವವನು ಉತ್ಸಾಹದಿಂದ ಭಾಗವಹಿಸಿದೆ. ಹಾಸ್ಯ ಚಟಾಕಿ ಹಾರಿಸಿದ್ದೂ ಇದೆ. ತಿಂಗಳ ನಂತರ ಹಿರಿಯರ ವಿಧವೆ ಭೇಟಿಮಾಡಿದರು. ಅವರು ಅಷ್ಟುಬೇಗ ಚೇತರಿಸಿಕೊಂಡಿದ್ದು ನನಗೇ ಆಶ್ಚರ್ಯವಾಯಿತು.

ಇದು ಹೇಗೆ ಸಾಧ್ಯವಾಯಿತು? ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಸಾಯುವವರಿಗೆ ಏನು ಬೇಕೋ ಅದನ್ನು ಕೊಡಿ; ನಿಮಗೆ ಬೇಕಾದುದನ್ನಲ್ಲ!

ಬದುಕು–ಸಾವಿನ ಬಗೆಗೆ ನಿಮ್ಮ ಅನಿಸಿಕೆಅನುಭವಗಳನ್ನು ತಿಳಿಸುತ್ತಿರಿ.
ಸಂಪರ್ಕಕ್ಕೆ: 8494933888;
**Email: vinod.chebbi@gmail.com**